ಕತೆ



ಚಂದ್ರಶೇಖರ ವಸ್ತ್ರದ
ಕಲೆ: ಮುರಳೀಧರ ರಾಠೋಡ್

# ಕುಣಾಲ

## ಕುಣಾಲ

ಬಾಲ್ಯದಿಂದಲೂ ಬೆಳದಿಂಗಳೆಂದರೆ ನನಗೆ ಅದೇನೋ ಮೋಹ. ಪೌರ್ಣಿಮೆಯ ಇರುಳಿನಲ್ಲಿ ಅರಮನೆಯ ಪರಿಚಾರಿಕೆಯರ ಕಣ್ಣುತಪ್ಪಿಸಿ ಪುಷ್ಪೋದ್ಯಾನಕ್ಕೆ ಓಡುತ್ತಿದ್ದೆ. ಬೆಳ್ದಾವರೆ, ಕೆಂದಾವರೆಗಳಿಂದ ಆವೃತವಾದ ಕೊಳದ ತಟದಲ್ಲಿ ಕುಳಿತು ಸುರಿವ ಬೆಳುದಿಂಗಳಿಗೆ ಮೈಯೊಡ್ಡಿ, ತೀಡುವ ತಂಗಾಳಿಗೆ ಹಾರಾಡುವ ಮುಂಗುರುಳನ್ನು ಹಿಂದಕ್ಕೆ ತಳ್ಳುತ್ತಾ ನೀರವ ರಾತ್ರಿಯಲ್ಲಿ ಕರಗಿ ಹೋಗುವುದರಲ್ಲಿ, ಆಹ್! ಅದೆಂಥ ಸುಖವಿತ್ತು. ಆ ದಿವ್ಯ ಇರುಳು ಅದು ಹೇಗೆ ಕಳೆದು ಹೋಗುತ್ತಿತ್ತೋ ಏನೋ; ನಸುಕಿನ ಕುಳಿರ್ಗಾಳಿ ತಾಕಿದಾಗಲೋ, ಮುಂಗೋಳಿ ಕೂಗಿದಾಗಲೋ, ಇಲ್ಲವೆ ಹೂಗಳನ್ನರಸಿ ಗೂಡನ್ನು ಬಿಟ್ಟು ಹೊರಡುತ್ತಿದ್ದ ಜೇನ್ನೊಣಗಳ ಝೇಂಕೃತಿಗೋ ಭಾವಲೋಕಕ್ಕೆ ಭಂಗ ಉಂಟಾಗಿ ಗರಿಹಗುರ ಹೃದಯದೊಂದಿಗೆ ಅರಮನೆಯತ್ತ ಹೆಜ್ಜೆ ಹಾಕುತ್ತಿದ್ದೆ. ಇರುಳೆಲ್ಲ ಸುರಿದ ಬೆಳದಿಂಗಳು ನನ್ನ ಕೇಶರಾಶಿಯಿಂದ, ಹುಬ್ಬುಗಳಿಂದ, ಕಣ್ಣರೆಪ್ಪೆಯಿಂದ, ಚೂಪುಗದ್ದದಿಂದ, ವಿಶಾಲ ಭುಜಗಳಿಂದ, ಬಲಿಷ್ಠ ಬಾಹುಗಳಿಂದ ಕೆಳಗಿಳಿಯುತ್ತ, ಪಾದಗಳನ್ನು ತೋಯಿಸುತ್ತ ನೆಲಕ್ಕೆ ತಾಕುತ್ತಿದೆಯೇನೊ ಎಂದು ಭಾಸವಾಗುತ್ತಿತ್ತು. ಆ ಇಡೀ ದಿನ ಮೈತುಂಬ ಉಲ್ಲಾಸ ಉತ್ಸಾಹ ನದಿಯಾಗಿ ಪ್ರವಹಿಸುತ್ತಿತ್ತು. ಕತ್ತಿವರಸೆ ಇರಲಿ, ಕುದುರೆ ಸವಾರಿ ಇರಲಿ, ಮಲ್ಲಯುದ್ಧವಿರಲಿ, ಶಾಸ್ತ್ರಾಧ್ಯಯನವಿರಲಿ ಎಲ್ಲದರಲ್ಲೂ ಹರ್ಷಚಿತ್ತನಾಗಿ ಭಾಗಿಯಾಗುತ್ತಿದ್ದೆ. ಮೈತುಂಬ ಚೈತ್ರದ ಚಿಗುರು, ವಸಂತದ ಕುಕಿಲು.

ಆದರೆ, ಅಮವಾಸ್ಯೆ ಇದಕ್ಕೆ ತದ್ವಿರುದ್ಧವಾಗಿತ್ತು. ಹೆಚ್ಚು ಕಡಿಮೆ ನನಗೆ ತಿಳಿವಳಿಕೆ ಬಂದಾಗಿನಿಂದ ಅಮವಾಸ್ಯೆ ಸಮೀಪಿಸುತ್ತಿರುವಂತೆಯೆ ಭೀತಿ ಮೈಮನಗಳನ್ನೆಲ್ಲ ಆವರಿಸುತ್ತಿತ್ತು. ಅದಕ್ಕೆ ಕಾರಣ ಆ ಕನಸು. ಪದೇ ಪದೇ ಬೀಳುತ್ತಿದ್ದ ಭೀಕರ ಕನಸು. ಈಗ ಈ ಇಳಿವಯಸ್ಸಿನಲ್ಲಿ ಆ ಕನಸಿನ ಅರ್ಥ ಸ್ಪಷ್ಟವಾಗಿದೆ ಅಥವಾ ನನ್ನ ಬದುಕು ಅದನ್ನು ಸ್ಪಷ್ಟಗೊಳಿಸಿದೆ ಎನ್ನಲೆ?

ಕನಸು ಏನೆಂಬ ಕುತೂಹಲವಿದೆಯಲ್ಲವೆ ನಿಮಗೆ, ಹೇಳುವೆನು ಕೇಳಿ. "ಪುಟ್ಟ ಬಾಲಕನಾದ ನಾನು ಹಂಸಬಿಳುಪಿನ ಉಡುಗೆ ತೊಟ್ಟು ಬೆಳದಿಂಗಳ ಇರುಳಿನಲ್ಲಿ ಅದಾವುದೋ ಒಂದು ಸರೋವರದ ತಟಾಕದಲ್ಲಿ ವಿಹರಿಸುತ್ತಿದ್ದೆ. ಇದ್ದಕ್ಕಿದ್ದಂತೆ ಆ ಸರೋವರದಿಂದ ಉದ್ಭವಿಸಿದ ಜಲಕನ್ಯೆಯೊಬ್ಬಳು ನನ್ನೆಡೆಗೆ ಬಂದು ಆಟಕ್ಕೆ ತೊಡಗುತ್ತಿದ್ದಳು. ಕೆಲಗಳಿಗೆ ಆಡಿದ ನಂತರ, 'ಆಕಾಶದಲ್ಲಿ ಹಾರಾಡೋಣ ಬಾ' ಎಂದು ಕರೆದು ಹಕ್ಕಿಯಂತೆ ಗಗನಕ್ಕೆ ನೆಗೆಯುತ್ತಿದ್ದಳು. ಹಾರಾಡುವುದು ಗೊತ್ತಿಲ್ಲದ